**ನಂ.ಕೆಪಿಎಲ್‌ಸಿ/ಆಡಳಿತ/ಸಿಆರ್/13/15-16** **ದಿನಾಂಕ:18.09.2015**

ಮಾನ್ಯರೆ,

**ವಿಷಯ:** ಬೆಂಗಳೂರು ನಗರ ಜಿಲ್ಲೆಯಲ್ಲಿ ಒತ್ತುವರಿ ತೆರವುಗೊಳಿಸಲಾಗಿದೆಯೆಂದು ವರದಿಸಲಾಗಿರುವ ಪ್ರಕರಣಗಳಲ್ಲಿ ವ್ಯಕ್ತವಾಗಿರುವ ನ್ಯೂನ್ಯತೆಗಳ ಬಗ್ಗೆ.

**ಉಲ್ಲೇಖ:1** ಈ ನಿಗಮದ ಸಮ ಸಂಖ್ಯೆಯ ಪತ್ರ ದಿನಾಂಕ: 25.07.2015.

**2** ತಹಸೀಲ್ದಾರ್-1, ಕೆ.ಪಿ.ಎಲ್.ಸಿ. ಇವರು ನೀಡಿರುವ ಸ್ಥಳ ಪರಿಶೀಲನಾ ವರದಿ ದಿನಾಂಕ: 08.09.2015

ತಹಸೀಲ್ದಾರ್-2, ಕೆ.ಪಿ.ಎಲ್.ಸಿ. ಇವರು ನೀಡಿರುವ ಸ್ಥಳ ಪರಿಶೀಲನಾ ವರದಿ ದಿನಾಂಕ: 08.09.2015

****

ಬೆಂಗಳೂರು ನಗರ ಜಿಲ್ಲೆಯಲ್ಲಿ ಒತ್ತುವರಿಯಿಂದ ಹಿಂಪಡೆದ ಜಮೀನುಗಳ ಸ್ಥಿತಿಗತಿಗಳ ಬಗ್ಗೆ ಈ ನಿಗಮದ ತಹಸೀಲ್ದಾರರುಗಳಿಂದ ಕೆಲವೊಂದು ಜಮೀನುಗಳ ಸ್ಥಳ ಪರಿಶೀಲನೆ ಮಾಡಿಸಿ, ವ್ಯಕ್ತವಾಗಿರುವ ಅಂಶಗಳು ಹಾಗೂ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಉಲ್ಲೇಖ(1)ರ ಪತ್ರದ ಮೂಲಕ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿರುತ್ತದೆ. ವರದಿಯಲ್ಲಿ ತಿಳಿಸಿರುವ ಅಂಶಗಳ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೂ ಸಹ ಈಗಾಗಲೇ ತಿಳಿಸಲಾಗಿದೆ. ಸದರಿ ಪ್ರಕ್ರಿಯೆಯನ್ನು ಮುಂದುವರೆಸಿ, ಹಿಂಪಡೆಯಲಾಗಿದೆಯೆಂದು ವರದಿಸಲಾದ 27 ಸ್ಥಳಗಳ ಪರಿಶೀಲನಡೆಸಿ, ಈ ನಿಗಮದ ತಹಸೀಲ್ದಾರರುಗಳು ಉಲ್ಲೇಖ(1) ಮತ್ತು (2)ರ ಅನ್ವಯ ವರದಿಗಳನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ಗಮನಿಸಿರುವ ಅಂಶಗಳು ಈ ಮುಂದಿನಂತಿವೆ:

1. ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ ಚೂಡೇನಪುರ ಸರ್ವೆ ನಂ. 13ರಲ್ಲಿ 1-20 ಎ.ಗುಂ. ಸರ್ಕಾರಿ ಜಮೀನಿನ ಒತ್ತುವರಿ ತೆರವುಗೊಳಿಸಲಾಗಿದೆಯೆಂದು ವರದಿಸಲಾಗಿದ್ದು, ವಾಸ್ತವವಾಗಿ ಹಿಂಪಡೆದಿರುವ ಜಮೀನಿನ ವಿಸ್ತೀರ್ಣ ಕೇವಲ 0-21 ಗುಂಟೆ ಮಾತ್ರ ಇರುತ್ತದೆ.
2. ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ ರಾಮೋಹಳ್ಳಿ ಸರ್ವೆ ನಂ. 51ರಲ್ಲಿ 4-20 ಎ.ಗುಂ ಸರ್ಕಾರಿ ಜಮೀನಿನ ಒತ್ತುವರಿ ತೆರವುಗೊಳಿಸಲಾಗಿದೆಯೆಂದು ವರದಿಸಲಾಗಿದ್ದು, ವಾಸ್ತವವಾಗಿ ಹಿಂಪಡೆದ ಜಮೀನು ಸುಮಾರು 1-30 ಎ.ಗು. ಮಾತ್ರ ಇರುತ್ತದೆ. ಈ ಎರಡೂ ಪ್ರಕರಣಗಳಲ್ಲಿ ಒತ್ತುವರಿ ತೆರವು ಮಾಡಲಾಗಿದೆಯೆಂದು ವರದಿ ಮಾಡಿರುವ ವಿಸ್ತೀರ್ಣಕ್ಕಿಂತ ಬೌತಿಕವಾಗಿ ಹಿಂಪಡೆದ ವಿಸ್ತೀರ್ಣ ಕಡಿಮೆ ಇರುತ್ತದೆ.
3. ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ ಕಣ್ಮಿಣಕೆ ಸರ್ವೆ ನಂ. 41 ಮತ್ತು 42 ರಲ್ಲಿ 30 ಎಕರೆ ಸರ್ಕಾರಿ ಜಮೀನು ಹಿಂಪಡೆಯಲಾಗಿದೆ ಎಂದು ವರದಿಸಲಾಗಿದೆ. ಆದರೆ ಒತ್ತುವರಿ ತೆರವು ನಡೆದಿರುವುದಿಲ್ಲ. ಆದಾಗ್ಯೂ ಒತ್ತುವರಿ ತೆರವು ಮಾಡಲಾಗಿದೆಯೆಂದು ತೋರಿಸಲಾಗಿದೆ.
4. ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ ಅಗರ ಸರ್ವೆ ನಂ. 28 ರಲ್ಲಿ 7.05 ಎಕರೆ ಜಮೀನನ್ನು ಸರ್ಕಾರದ ವಶಕ್ಕೆ ಪಡೆದು, ಬಿ.ಬಿ.ಎಂ.ಪಿ.ಗೆ ನೀಡಲಾಗಿರುತ್ತದೆ.

5. ಬೆಂಗಳೂರು ಉತ್ತರ(ಅಪರ) ತಾಲ್ಲೂಕು ಯಲಹಂಕ ಹೋಬಳಿ ಆವಲಹಳ್ಳಿ ಸರ್ವೆ ನಂ 79 ರಲ್ಲಿ ಎರಡು ಸ್ಥಳಗಳಲ್ಲಿ ತಲಾ 1–00 ಎಕರೆಯಂತೆ ಒಟ್ಟು 2–00 ಎಕರೆ ಸರ್ಕಾರಿ ಜಮೀನನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಾಗಿರುತ್ತದೆ. ಸದರಿ ಜಮೀನುಗಳನ್ನು ವಿಶೇಷ ಜಿಲ್ಲಾಧಿಕಾರಿಯವರು ಕರ್ನಾಟಕ ಭೂ ಕಂದಾಯ ಕಾಯೆ ಕಲಂ 136(3)ರ ಅಡಿಯಲ್ಲಿ ಹೊರಡಿಸಿದ ಆದೇಶದ ಅನ್ವಯ ಸರ್ಕಾರದ ಸುಬರ್ದಿಗೆ ತೆಗೆದುಕೊಳ್ಳಲಾಗಿರುತ್ತದೆ. ತದನಂತರ ಸದರಿ ಆದೇಶದ ವಿರುದ್ಧ ಅಪೀಲು/ರಿಟ್ ಅರ್ಜಿ ದಾಖಲಿಸಿದ ಬಗ್ಗೆ ಮಾಹಿತಿ ಒದಗಿಸಿರುವುದಿಲ್ಲ. ಈ ಜಮೀನುಗಳಿಗೆ ಸಂಬಂಧಪಟ್ಟಂತೆ ನ್ಯಾಯಾಲಯ ಪ್ರಕರಣಗಳನ್ನು ಗಮನಿಸುವ ಅಗತ್ಯವಿರುತ್ತದೆ.
6. ಬೆಂಗಳೂರು ಉತ್ತರ ಅಪರ ತಾಲ್ಲೂಕು ಯಲಹಂಕ ಹೋಬಳಿ ಆವಲಹಳ್ಳಿ ಸರ್ವೆ ನಂ. 80ರ ಒಂದು ಕಡೆ 0–10 ಗುಂಟೆ ಹಾಗೂ ಇನ್ನೊಂದು ಕಡೆ 0–37 ಗುಂಟೆ ಸರ್ಕಾರಿ ಜಮೀನಿನ ಒತ್ತುವರಿ ತೆರವುಗೊಳಿಸಲಾಗಿದೆಯೆಂದು ವರದಿಸಲಾಗಿದೆ. ಈ ಜಮೀನುಗಳನ್ನು ಹರಾಜು ಮೂಲಕ ವಿಲೇವಾರಿ ಮಾಡಲಾಗಿದ್ದು ಮೆ: ರಾಮಕೃಷ್ಣ ಶಿಕ್ಷಣ ಸಂಸ್ಥೆಯವರು ಹರಾಜಿನಲ್ಲಿ ಪಡೆದಿರುತ್ತಾರೆಂದು ಸ್ಥಳ ಪರಿಶೀಲನಾ ಸಮಯದಲ್ಲಿ ಮಾಹಿತಿ ಒದಗಿಸಿರುತ್ತಾರೆ. ಈ ಜಮೀನುಗಳ ಬಾಜುದಾರರು ಒತ್ತುವರಿ ಮಾಡಿಕೊಂಡಿದ್ದನ್ನು ತೆರವುಗೊಳಿಸಿರುವುದಾಗಿ ತಿಳಿಸಿರುತ್ತಾರೆ. ಈ ಜಮೀನನ್ನು ಉಳುಮೆ ಮಾಡಿದ ಅಥವ ಕಟ್ಟಡ ಕಟ್ಟಿದ್ದ ಕುರುಗಳು ಕಂಡು ಬಂದಿರುವುದಿಲ್ಲ.
7. ಬೆಂಗಳೂರು ದಕ್ಷಿಣ ತಾಲ್ಲೂಕು ತಾವರೆಕೆರೆ ಹೋಬಳಿ ಕುರುಬರಹಳ್ಳಿ ಸರ್ವೆ ನಂ. 116ರಲ್ಲಿ 5–00 ಎಕರೆ ಸರ್ಕಾರಿ ಜಮೀನನ್ನು ಒತ್ತುವರಿಯಿಂದ ಹಿಂಪಡೆಯಲಾಗಿದೆಯೆಂದು ವರದಿ ಇರುತ್ತದೆ. ಸದರಿ ಜಮೀನನ್ನು ಈ ಹಿಂದೆಯೇ ಬಿ.ಎಂ.ಟಿ.ಸಿ.ಯವರಿಗೆ ನೀಡಲಾಗಿರುತ್ತದೆ. ಸದರಿ ಜಮೀನು ಹಿಂಪಡೆದ ನಂತರವೂ ನಾಮ ಫಲಕ ಹಾಕಿಸಿರುವುದಿಲ್ಲ. ರಾಜಸ್ವ ನಿರೀಕ್ಷಕರು ನೀಡಿರುವ ಮಾಹಿತಿ ಅನ್ವಯ ನಮೂನೆ–50/53ರ ಅರ್ಜಿಗಳು ಬಾಕಿ ಇರುತ್ತವೆ. ಇವುಗಳನ್ನು ತ್ವರಿತವಾಗಿ ಇತ್ಯರ್ಥಪಡಿಸುವ ಅಗತ್ಯವಿರುತ್ತದೆ. ಬಿ.ಎಂ.ಟಿ.ಸಿ.ಯವರು ಪುನ: ಒತ್ತುವರಿಯಾಗದಂತೆ ಸದರಿ ಜಮೀನನ್ನು ಸಂರಕ್ಷಿಸುವ ಅಗತ್ಯವಿರುತ್ತದೆ.
8. ಬೆಂಗಳೂರು ದಕ್ಷಿಣ ತಾಲ್ಲೂಕು ತಾವರೆಕೆರೆ ಹೋಬಳಿ ಗಂಗಪ್ಪನ ಹಳ್ಳಿ ಸರ್ವೆ ನಂ. 13 ರಲ್ಲಿ 5–00 ಎಕರೆ ಸರ್ಕಾರಿ ಜಮೀನು ಒತ್ತುವರಿಯಿಂದ ಹಿಂಪಡೆಯಲಾಗಿದೆಯೆಂದು ವರದಿಯಾಗಿದ್ದು, ಸ್ಥಳ ಪರಿಶೀಲನಾ ಸಮಯದಲ್ಲಿ ಒತ್ತುವರಿದಾರರಾದ ಶ್ರೀ ಸಂಜಯ್ ಎಂಬುವವರು ಪುನ: ಒತ್ತುವರಿ ಮಾಡಿ ಜಮೀನು ಉಳುಮೆ ಮಾಡಿರುವುದು ವ್ಯಕ್ತವಾಗಿರುತ್ತದೆ. ಒತ್ತುವರಿ ತಡೆಗಟ್ಟಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ.
9. ಬೆಂಗಳೂರು ದಕ್ಷಿಣ ತಾಲ್ಲೂಕು ತಾವರೆಕೆರೆ ಹೋಬಳಿ ಪುನಗಮಾರನಹಳ್ಳಿ ಸರ್ವೆ ನಂ. 15ರಲ್ಲಿ 1–30 ಎ.ಗುಂ ಸರ್ಕಾರಿ ಜಮೀನಿನ ಒತ್ತುವರಿ ತೆರವು ಮಾಡಿಸಲಾಗಿದೆಯಿಂದು, ದಿನಾಂಕ: 01.02.2015ರ 'ವಿಜಯ ಕರ್ನಾಟಕ' ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ. ರಾಜಸ್ವ ನಿರೀಕ್ಷಕರು ನೀಡಿರುವ ಮಾಹಿತಿಯಂತೆ ಸದರಿ ಜಮೀನನ್ನು ಈ ಹಿಂದೆ ಹರಾಜು ಮಾಡಲಾಗಿದ್ದು, ಜಮೀನಿನ ಖರಿದಿದಾರರು ಬಡಾವಣೆ ನಿರ್ಮಿಸಿಕೊಂಡಿರುತ್ತಾರೆ. ಆದ್ದರಿಂದ, ಸದರಿ ಜಮೀನಿನ ಒತ್ತುವರಿ ತೆರವು ಮಾಡಿಸುವ ಪ್ರಮೇಯ ಇರುವುದಿಲ್ಲ. ಇದಲ್ಲದೆ ಸದರಿ ಜಮೀನಿನ ಇನ್ನಾವುದೇ ಭಾಗದಲ್ಲಿ ಒತ್ತುವರಿ ತೆರವು ಮಾಡಿಸಿದ ಮಾಹಿತಿ ಒದಗಿಸಿರುವುದಿಲ್ಲ. ಇದಲ್ಲದೆ ತಾಲ್ಲೂಕು ಕಛೇರಿಯಿಂದ ದಿನಾಂಕ: 04.09.2015ರಂದು ಒದಗಿಸಿರುವ ಮಾಹಿತಿಯಲ್ಲಿಯೂ ಸಹ ಸದರಿ ಒತ್ತುವರಿ ತೆರವು ಮಾಡಿಸಿದ ಮಾಹಿತಿ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಒತ್ತುವರಿ ತೆರವು ಮಾಡದೇ ಇದ್ದಾಗ್ಯೂ ಒತ್ತುವರಿ ತೆರವು ಮಾಡಿಸಲಾಗಿದೆಯೆಂದು ವರದಿಸಲಾಗಿದೆ.

10. ಬೆಂಗಳೂರು ದಕ್ಷಿಣ ತಾಲ್ಲೂಕು ತಾವರೆಕೆರೆ ಹೋಬಳಿ ಚಿಕ್ಕೆಲ್ಲೂರು ರಾಂಪುರ ಸರ್ವೆ ನಂ. 3(1–17), 1(6–30), 18(2–25) ಈ ಸರ್ಕಾರಿ ಜಮೀನುಗಳು ಒಂದಕ್ಕೊಂದು ಹೊಂದಿಕೊಂಡಿರುತ್ತವೆ. ಈ ಜಮೀನುಗಳನ್ನು ಇಂಡೋ ಅಮೆರಿಕನ್ ಹೈಬ್ರಿಡ್ ಸೀಡ್ಸ್ ಸಂಸ್ಥೆಯವರು ಒತ್ತುವರಿ ಮಾಡಿಕೊಂಡಿದ್ದನ್ನು ಹಿಂದಕ್ಕೆ ಪಡೆಯಲಾಗಿರುತ್ತದೆ. ಇದಕ್ಕೆ ಬೇಲಿ ಹಾಕಿಸಿರುವುದಿಲ್ಲ. ನಾಮ ಫಲಕಗಳನ್ನು ಹಾಕಿಸಿದ್ದು, ಕೆಲವೊಂದು ಕಡೆ ಹಾನಿಯುಂಟಾಗಿರುತ್ತದೆ. ಈ ಜಮೀನುಗಳನ್ನು ಆಶ್ರಯ ಯೋಜನೆಗೆ ಮೀಸಲಿಡಲು ಉದ್ದೇಶಿಸಲಾಗಿದೆ ಎಂದು ತಿಳಿಸಿರುತ್ತಾರೆ. ಪ್ರಸ್ತಾಪಿತ ಉದ್ದೇಶಕ್ಕೆ ತ್ವರಿತವಾಗಿ ಬಳಸುವ ಅಗತ್ಯವಿರುತ್ತದೆ.
11. ದೊಡ್ಡಜಾಲ ಗ್ರಾಮದ ಸರ್ವೆ ನಂ.43/8 ಸರ್ಕಾರದ ಸುಪರ್ದಿಗೆ ತೆಗೆದುಕೊಳ್ಳಲಾಗಿದೆ ಎಂದು ವರದಿ ಮಾಡಿದ ವಿಸ್ತೀರ್ಣ 2–00 ಎಕರೆಗಳು. ಈ ಬಗ್ಗೆ ದಿನಾಂಕ: 11.11.2014ರ ಮಹಜರ್ ಪ್ರತಿಯನ್ನು ಒದಗಿಸಿರುತ್ತಾರೆ. ಆದರೆ ಒತ್ತುವರಿ ಹಾಗೆಯೇ ಇರುತ್ತದೆ. ಒತ್ತುವರಿದಾರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ.53213/2014 ಪ್ರಕರಣವನ್ನು ದಾಖಲಿಸಿದ್ದು, ದಿನಾಂಕ: 17.11.2014ರ ಆದೇಶದಲ್ಲಿ, ವಾದಿಯರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳಲು ವಿಶೇಷ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿದೆ. ಮುಂದುವರೆದು, 'Till then the respondents are directed not to take any precipitative action on the land in question' ಎಂದು ಸೂಚಿಸಲಾಗಿರುತ್ತದೆ. ಈ ಬಗ್ಗೆ ವಿಶೇಷ ಜಿಲ್ಲಾಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕಾಗಿರುತ್ತದೆ.
12. ಚೊಕ್ಕನಹಳ್ಳಿ ಗ್ರಾಮ, ಸರ್ವೆ ನಂ.70 ರಲ್ಲಿ ಒತ್ತುವರಿ 4–30 ಎ:ಗುಂ. ತೆರವುಗೊಳಿಸಿ ಜವಾಹರಲಾಲ್ ಸೆಂಟರ್ ಫಾರ್ ಅಡ್ವಾನ್ಸ್ಡ್ ಸೈಂಟಿಫಿಕ್ ರಿಸರ್ಚ್, ಜಕ್ಕೂರು ಇವರಿಗೆ ಹಿಂತಿರುಗಿಸಿದೆ ಎಂದು ವರದಿಸಲಾಗಿದೆ. ಸ್ಥಳ ಪರಿಶೀಲನಾ ಸಮಯದಲ್ಲಿ ಸದರಿ ಸಂಸ್ಥೆಯವರು ಜಮೀನಿನ ಸ್ವಾಧಿನದಲ್ಲಿರುವುದು ವ್ಯಕ್ತವಾಗಿರುತ್ತದೆ.
13. ಮಾರೇನಹಳ್ಳಿ ಗ್ರಾಮದ ಸರ್ವೆ ನಂ.58/ಪಿ11, ರಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ಕಲಂ 136(3) ರಡಿ ವಿಶೇಷ ಜಿಲ್ಲಾಧಿಕಾರಿಗಳು ಮಾಡಿರುವ ಆದೇಶದಂತೆ 2–20 ಎ:ಗುಂ. ಜಮೀನನ್ನು ಸರ್ಕಾರದ ಸುಪರ್ದಿಗೆ ತೆಗೆದುಕೊಳ್ಳಲಾಗಿದೆ ಎಂದು ವರದಿಸಲಾಗಿದೆ. ಸದರಿ ಜಮೀನಿನ ಸುತ್ತಲೂ ಕಂದಕ ನಿರ್ಮಿಸಿ, ನಾಮ ಫಲಕ ಹಾಕಿಸಿದ್ದಾಗಿ ಸ್ಥಳ ಪರಿಶೀಲನಾ ಸಮಯದಲ್ಲಿ ರಾಜಸ್ವ ನಿರೀಕ್ಷಕರು ತಿಳಿಸಿರುತ್ತಾರೆ. ಆದರೆ, ಕಂದಕ ಮುಚ್ಚಿ ನಾಮ ಫಲಕ ತೆಗೆದುಹಾಕಿರುವುದು ಕಂಡುಬಂದಿರುತ್ತದೆ. ಆದ್ದರಿಂದ ಸದರಿ ಜಮೀನಿನ ಸಂರಕ್ಷಣೆಗೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕಾಗಿದೆ.
14. ಮಾರೇನಹಳ್ಳಿ ಗ್ರಾಮದ ಸರ್ವೆ ನಂ.200/ಪಿ21ರಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ಕಲಂ 136(3) ರಡಿ ವಿಶೇಷ ಜಿಲ್ಲಾಧಿಕಾರಿಗಳು ಮಾಡಿರುವ ಆದೇಶದಂತೆ 2–00 ಎ:ಗುಂ. ಜಮೀನನ್ನು ಸರ್ಕಾರದ ಸುಪರ್ದಿಗೆ ತೆಗೆದುಕೊಳ್ಳಲಾಗಿದೆ ಎಂದು ವರದಿ ಮಾಡಲಾಗಿತ್ತು. ಸದರಿ ಜಮೀನಿನ ಸುತ್ತಲೂ ಕಂದಕ ನಿರ್ಮಿಸಲಾಗಿದೆ. ಜಮೀನು ಸಂರಕ್ಷಣೆಗೆ ಒಂದು ಸೂಚನಾಫಲಕವನ್ನು ತೂಗುಹಾಕಿದೆ. ರಿಟ್ ಅರ್ಜಿ ಸಂಖ್ಯೆ.53915/2014 ಪ್ರಕರಣ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇದೆ. ಈ ಪ್ರಕರಣವನ್ನು ಪರಿಣಾಮಕಾರಿಯಾಗಿ ಸಮರ್ಥಿಸಿಕೊಳ್ಳುವ ಅಗತ್ಯ ಇರುತ್ತದೆ.
15. ಮಾರೇನಹಳ್ಳಿ ಗ್ರಾಮದ ಸರ್ವೆ ನಂ.200/ಪಿ36ರಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ಕಲಂ 136(3) ರಡಿ ವಿಶೇಷ ಜಿಲ್ಲಾಧಿಕಾರಿಗಳು ಮಾಡಿರುವ ಆದೇಶದಂತೆ, 2–00 ಎ:ಗುಂ. ಜಮೀನನ್ನು ಸರ್ಕಾರದ ಸುಪರ್ದಿಗೆ ತೆಗೆದುಕೊಳ್ಳಲಾಗಿದೆ ಎಂದು ವರದಿ ಮಾಡಲಾಗಿತ್ತು. ಸದರಿ ಜಮೀನಿನ ಸುತ್ತಲೂ ಕಂದಕ ನಿರ್ಮಿಸಲಾಗಿದೆ. ಜಮೀನು

ಸಂರಕ್ಷಣೆಗೆ ಒಂದು ಸೂಚನಾಫಲಕವನ್ನು ತೂಗುಹಾಕಿದೆ. ರಿಟ್ ಅರ್ಜಿ ಸಂಖ್ಯೆ.53915/2014 ಪ್ರಕರಣ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇದೆ. ಈ ಪ್ರಕರಣವನ್ನು ಪರಿಣಾಮಕಾರಿಯಾಗಿ ಸಮರ್ಥಿಸಿಕೊಳ್ಳುವ ಅಗತ್ಯ ಇರುತ್ತದೆ.

16. ದೊಡ್ಡಜಾಲ ಗ್ರಾಮದ ಸರ್ವೆ ನಂ.46/ಪಿ1 ರಲ್ಲಿ 3–00 ಎಕರೆ ಜಮೀನು ಒತ್ತುವರಿ ತೆರವುಗೊಳಿಸಿದೆ ಎಂದು ವರದಿ ಮಾಡಲಾಗಿತ್ತು. ಆದರೆ, ಸ್ಥಳ ಪರಿಶೀಲನೆ ವೇಳೆ ಜಮೀನನ್ನು ಹೊಸದಾಗಿ ಉಳುಮೆ ಮಾಡಿದಂತೆ ಕಾಣಿಸಿದೆ. ಆದ್ದರಿಂದ ಒತ್ತುವರಿ ಮುಂದುವರೆದಿದೆ. ಪುನ: ಒತ್ತುವರಿಯಾಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವ ಅಗತ್ಯ ಇದೆ.
17. ವಡೇರಹಳ್ಳಿ ಗ್ರಾಮದ ಬ್ಲಾಕ್ ನಂ.4/1, ಸರ್ವೆ ನಂ.36 ರಲ್ಲಿ, 1–00 ಎಕರೆ ವಿಸ್ತೀರ್ಣದ ಒತ್ತುವರಿ ತೆರವುಗೊಸಿರುವುದಾಗಿ ವರದಿಸಲಾಗಿದೆ. ಈ ಜಮೀನು ಈ ಹಿಂದೆ ಬಹಿರಂಗ ಹರಾಜಿನಲ್ಲಿ ಮೆ: ಕೃಷಿ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್‌ರವರಿಗೆ ನೀಡಿದ ಜಮೀನಾಗಿರುತ್ತದೆ. ಸದರಿ ಜಮೀನು ಅವರಿಗೆ ಹಸ್ತಾಂತರಿಸಲಾಗಿದ್ದು, ತಂತಿ ಬೇಲಿ ಹಾಕಲಾಗಿದೆ.
18. ವಡೇರಹಳ್ಳಿ ಗ್ರಾಮ, ಸರ್ವೆ ನಂ.36ರಲ್ಲಿ 1–30 ಎಕರೆ ವಿಸ್ತೀರ್ಣದ ಜಮೀನು ತೆರವಾದ ಬಗ್ಗೆ ವರದಿ ಮಾಡಲಾಗಿದೆ. ಒತ್ತುವರಿದಾರರು ನಿರ್ಮಾಣ ಮಾಡಿದ್ದ ಅಕ್ರಮ ಬಡಾವಣೆಯಲ್ಲಿನ ಒಳಚರಂಡಿ ತೆರವು ಮಾಡಲಾಗಿರುತ್ತದೆ. ಸದರಿ ಒತ್ತುವರಿದಾರರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ, ಎಫ್.ಐ.ಆರ್. ಹಾಕಿಸಲಾಗಿದೆ. ಸದರಿ ಜಮೀನನ್ನು ಸಂರಕ್ಷಿಸುವ ಸಲುವಾಗಿ ತಂತಿ ಬೇಲಿ ಅಥವಾ ಟ್ರೆಂಚಿಂಗ್ ಮಾಡಿಸಿ, ನಾಮ ಫಲಕ ಹಾಕಿಸಿರುವುದಿಲ್ಲ. ಸಂರಕ್ಷಣೆಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಿದೆ. ಸದರಿ ಜಮೀನನ್ನು ಭೂ ಸ್ವಾಧೀನ ಕಾಯ್ದೆ, 1894 ಕಲಂ 4(1) ರಡಿ ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕಾಗಿ ಅಧಿಸೂಚನೆ ಹೊರಡಿಸಿದೆ.
19. ಮೈಲಸಂದ್ರ ಗ್ರಾಮ, ಸರ್ವೆ ನಂ.80ರಲ್ಲಿ 4–00 ಎಕರೆ ವಿಸ್ತೀರ್ಣದ ಒತ್ತುವರಿ ತೆರವಾಗಿದೆ ಎಂದು ವರದಿ ಮಾಡಲಾಗಿದೆ. ತಂತಿ ಬೇಲಿ ಮತ್ತು ನಾಮ ಫಲಕ ಹಾಕಿದೆ. ಕೆರೆ–ಕಾಲುವೆ ಒತ್ತುವರಿ ಕಾರ್ಯಾಚರಣೆಯಲ್ಲಿ ನಿರಾಶ್ರಿತರಾದವರಿಗೆ ಪುನರ್ವಸತಿ ಕಲ್ಪಿಸುವುದಕ್ಕಾಗಿ 2–00 ಎಕರೆ ಜಮೀನಿನ ಮೀಸಲಾತಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಪೋಲೀಸ್ ಮತ್ತು ಕಂದಾಯ ಇಲಾಖೆಗಳ ಅಧಿಕಾರಿ/ಸಿಬ್ಬಂದಿಗಳ ವಸತಿಗೃಹ ನಿರ್ಮಾಣಕ್ಕೆ 0–30 ಗುಂಟೆ ವಿಸ್ತೀರ್ಣದ ಜಮೀನು ಮತ್ತು ಅಂಗನವಾಡಿ ಕೇಂದ್ರಕ್ಕೆ 0–04 ಗುಂಟೆ ವಿಸ್ತೀರ್ಣ ಮೀಸಲಿಡಲು ಪ್ರಸ್ತಾವನೆ ಸಲ್ಲಿಸಲಾಗಿದೆ.
20. ಸೋಮನಹಳ್ಳಿ ಗ್ರಾಮ, ಸರ್ವೆ ನಂ.225ರಲ್ಲಿ ಆಶ್ರಯ ಹೌಸಿಂಗ್ ಪ್ರಾಜೆಕ್ಟ್ ರವರಿಗೆ ಮಂಜೂರಾದ 33–00 ಎಕರೆ ಜಮೀನು ಆಚಾರ್ಯ ಪಾಠಶಾಲೆ ಎಜುಕೇಶನ್ ಟ್ರಸ್ಟ್ ಇವರಿಂದ ಒತ್ತುವರಿ ಅಗಿರುವುದು ತೆರವಾಗಿದೆ ಎಂದು ವರದಿ ಮಾಡಲಾಗಿದೆ. ಆದರೆ ಒತ್ತುವರಿ ಇನ್ನೂ ಹಾಗೇ ಇದೆ. ಈಗಾಗಲೇ ಒತ್ತುವರಿ ತೆರವು ಸಮಯದಲ್ಲಿ ಧ್ವಂಸಗೊಳಿಸಿದ ಕಾಂಪೌಂಡ್ ಗೋಡೆಯನ್ನು ಒತ್ತುವರಿದಾರರು ಮರು ನಿರ್ಮಾಣ ಮಾಡಿ ಒತ್ತುವರಿ ಮುಂದುವರೆಸುತ್ತಿದ್ದಾರೆ. ಹಾಗೂ ಹಲವು ಕಟ್ಟಡಗಳನ್ನು ವಶದಲ್ಲಿರಿಸಿಕೊಂಡಿದ್ದಾರೆ. ರಿಟ್ ಅರ್ಜಿ ಸಂಖ್ಯೆ.57685/2014 ಇನ್ನೂ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇದೆ. ಪ್ರಕರಣವನ್ನು ನ್ಯಾಯಾಲಯದಲ್ಲಿ ಪರಿಣಾಮಕಾರಿಯಾಗಿ ಸಮರ್ಥಿಸಿಕೊಳ್ಳುವ ಅಗತ್ಯವಿದೆ. ರಾಷ್ಟ್ರೀಯ ಹೆದ್ದಾರಿ ಯೋಜನೆಯಡಿ 7320 ಚದರ ಮೀಟರ್ ಕ್ಷೇತ್ರಕ್ಕೆ ಭೂಸ್ವಾಧೀನ ಅಧಿಸೂಚನೆ ಹೊರಡಿಸಿದೆ.
21. ಹೊಮ್ಮದೇವನಹಳ್ಳಿ ಗ್ರಾಮ ಸರ್ವೆ ನಂ.57 ರಲ್ಲಿ 18–00 ಎಕರೆ ಒತ್ತುವರಿ ಆಗಿದೆ ಎಂದು ವರದಿಸಲಾಗಿದೆ. ಈ ಜಮೀನಿನಲ್ಲಿ ರಚಿಸಿದ್ದ ನಿವೇಶನಗಳನ್ನು ಭಾಗಶ: ತೆರವು ಮಾಡಿಸಲಾಗಿರುತ್ತದೆ. ವಸತಿ ಕಟ್ಟಡಗಳು, ಷೆಡ್‌ಗಳು ಮತ್ತು ತಂತಿಬೇಲಿಯೊಂದಿಗಿನ

ನಿವೇಶನಗಳು ಸದರಿ ಅಕ್ರಮ ಬಡಾವಣೆಗಳಲ್ಲಿ ಇನ್ನೂ ಹಾಗೆಯೇ ಇವೆ. ಉಳಿದ ಒತ್ತುವರಿ ತೆರವುಗೊಳಿಸಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿದೆ. ಸಂರಕ್ಷಣೆಗೆ ಸೂಕ್ತ ಕ್ರಮ ಕೈಗೊಳ್ಳುವ ಅಗತ್ಯ ಇದೆ. ನ್ಯಾಯಾಲಯ ಪ್ರಕರಣಗಳ ಬಗ್ಗೆ ಮಾಹಿತಿ ಒದಗಿಸಿರುವುದಿಲ್ಲ.

22. ಅರೆಹಳ್ಳಿ ಗ್ರಾಮ, ಸರ್ವೆ ನಂ.28ರಲ್ಲಿ, 1–35 ಎಕರೆ:ಗುಂಟೆ ವಿಸ್ತೀರ್ಣದ ಜಮೀನು ತೆರವುಗೊಳಿಸಿದ ಬಗ್ಗೆ ವರದಿ ಮಾಡಲಾಗಿತ್ತು. ಜಮೀನಿನ ಸಂರಕ್ಷಣೆಗಾಗಿ ಮುಳ್ಳುತಂತಿಬೇಲಿ ನಿರ್ಮಾಣ ಮಾಡಲಾಗಿದೆ.
23. ದೊಡ್ಡನಾಗಮಂಗಲ ಗ್ರಾಮ, ಸರ್ವೆ ನಂ.11ರಲ್ಲಿ 6–00 ಎಕರೆ ಜಮೀನಿನ ಒತ್ತುವರಿ ತೆರವುಗೊಳಿಸಿದ ಬಗ್ಗೆ ವರದಿ ಮಾಡಲಾಗಿತ್ತು. ಜಮೀನು ಸಂರಕ್ಷಣೆಗೆ ಮುಳ್ಳುತಂತಿ ಬೇಲಿ ಹಾಕಿದೆ. ಆಶ್ರಯ ವಸತಿ ಯೋಜನೆಗೆ ಪ್ರಸ್ತಾವನೆ ಸಲ್ಲಿಸಿದೆ.

ಮೇಲ್ಕಾಣಿಸಿದ ಉದಾಹರಣೆಗಳಿಂದ ವ್ಯಕ್ತವಾಗುವುದೇನೆಂದರೆ, ಕೆಲವು ಪ್ರಕರಣಗಳಲ್ಲಿ ಒತ್ತುವರಿ ತೆರವು ಮಾಡಿಸಲಾಗಿದೆ ಎಂದು ವರದಿ ಮಾಡಿರುವ ವಿಸ್ತೀರ್ಣಕ್ಕಿಂತ ವಾಸ್ತವವಾಗಿ ಹಿಂಪಡೆದ ಜಮೀನಿನ ವಿಸ್ತೀರ್ಣ ಕಡಿಮೆ ಇರುತ್ತದೆ. ಕೆಲವು ಪ್ರಕರಣಗಳಲ್ಲಿ ಒತ್ತವರಿ ತೆರವು ಮಾಡದೇ ಇದ್ದಾಗ್ಯೂ ಒತ್ತುವರಿ ತೆರವುಗೊಳಿಸಲಾಗಿದೆ ಎಂದು ವರದಿಸಲಾಗಿದೆ. ಪುನಗಮಾರನಹಳ್ಳಿ ಪ್ರಕರಣದಲ್ಲಿ ಒತ್ತುವರಿ ತೆರವುಗೊಳಿಸಲಾಗಿದೆ ಎಂದು ದಿನಾಂಕ: 01.02.2015ರ 'ವಿಜಯ ಕರ್ನಾಟಕ' ದಿನಪತ್ರಿಕೆಯಲ್ಲಿಯೂ ವರದಿಯಾಗಿದ್ದು, ರಾಜಸ್ವ ನಿರೀಕ್ಷಕರು ಹಾಗೂ ತಾಲ್ಲೂಕು ಕಛೇರಿಯಿಂದ ನೀಡಿರುವ ಮಾಹಿತಿಯಲ್ಲಿ ಒತ್ತುವರಿ ತೆರವು ಮಾಡಿಸಿದ ಮಾಹಿತಿ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಇನ್ನು ಕೆಲವು ಪ್ರಕರಣಗಳಲ್ಲಿ ನ್ಯಾಯಾಲಯ ಪ್ರಕರಣಗಳು ದಾಖಲಾಗಿರುವ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವ ಅಗತ್ಯವಿರುತದೆ. ಕೆಲವು ಪ್ರಕರಣದಲ್ಲಿ ಒತ್ತುವರಿ ಹಾಗಯೇ ಮುಂದುವರೆದಿರುತ್ತದೆ. ಸೋಮನಹಳ್ಳಿ ಪ್ರಕರಣದಲ್ಲಿ ಒತ್ತುವರಿದಾರರು ಮುಂದುವರೆದಿರುತ್ತಾರೆ. ಇನ್ನೊಂದು ಪ್ರಕರಣದಲ್ಲಿ ಒತ್ತುವರಿ ಇತ್ತೇ ಇಲ್ಲವೇ ಎಂಬುದು ಸ್ಪಷ್ಟಪಟ್ಟಿರುವುದಿಲ್ಲ. ಕೆಲವು ಪ್ರಕರಣಗಳಲ್ಲಿ ಒತ್ತುವರಿ ಭಾಗಶ: ಮಾತ್ರ ತೆರವುಗೊಳಿಸಿದೆ. ಕುರುಬರಹಳ್ಳಿ ಪ್ರಕರಣದಲ್ಲಿ ಸರ್ಕಾರಿ ಜಮೀನು ಬಿ.ಎಂ.ಟಿ.ಸಿ.ಯವರಿಗೆ ನೀಡಿದ್ದು, ಇದನ್ನು ಸೂಕ್ತವಾಗಿ ಒತ್ತುವರಿಯಾಗದಂತೆ ಸದರಿ ಸಂಸ್ಥೆಯವರು ಕಾಪಾಡುವ ಅಗತ್ಯವಿರುತ್ತದೆ. ನಮೂನೆ–50/53ರ ಬಾಕಿ ಅರ್ಜಿಗಳ ಬಗ್ಗೆ ಕ್ರಮ ಕೈಗೊಳ್ಳಬೇಕಿರುತ್ತದೆ. ಆಶ್ರಯ ಯೋಜನೆಗೆ ಪ್ರಸ್ತಾಪಿಸಿರುವ ಜಮೀನುಗಳನ್ನು ಆ ಉದ್ದೇಶಕ್ಕೆ ತ್ವರಿತವಾಗಿ ಬಳಸುವ ಅಗತ್ಯವಿರುತ್ತದೆ.

ಈ ನಿಗಮದ ತಹಸೀಲ್ದಾರರು ಸ್ಥಳ ಪರಿಶೀಲನೆ ನಡೆಸಿರುವ ಜಮೀನುಗಳ ಬಗ್ಗೆ ನ್ಯಾಯಾಲಯ ಪ್ರಕರಣಗಳು, ಭೂ ಸ್ವಾಧೀನ ಅಧಿಸೂಚನೆ ಬಗ್ಗೆ ಮಾಹಿತಿ ಒದಗಿಸುವಂತೆ ದಿನಾಂಕ: 07.08.2015ರ ಪತ್ರದ ಮೂಲಕ ತಹಸೀಲ್ದಾರರನ್ನು ಕೋರಲಾಗಿದ್ದು, ಅನುಕ್ರಮವಾಗಿ ದಿನಾಂಕ: 04.09.2015 ಮತ್ತು 05.09.2015ರಂದು ಸಂಬಂಧಪಟ್ಟ ತಾಲ್ಲೂಕು ಕಚೇರಿಗಳಿಂದ ಒದಗಿಸಿರುವ ಲಿಖಿತ ಮಾಹಿತಿಗಳಲ್ಲಿ ನಿರ್ದಿಷ್ಟ ಮಾಹಿತಿ ಒದಗಿಸಿರುವುದಿಲ್ಲ.

ಇದರಿಂದ ಜಿಲ್ಲಾಡಳಿತ ಒದಗಿಸಿರುವ ಮಾಹಿತಿಗಳು ಪೂರ್ಣವಾಗಿ ಸರಿಯಾಗಿರುವುದಿಲ್ಲ. ಹಿಂಪಡೆದ ಜಮೀನುಗಳನ್ನು ಸಂರಕ್ಷಿಸುವಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವ ಅಗತ್ಯ ಇರುತ್ತದೆ. ನ್ಯಾಯಾಲಯ ಪ್ರಕರಣಗಳ ಬಗ್ಗೆ ತೀವ್ರ ಗಮನ ನೀಡಿ ಸರ್ಕಾರದ ಹಿತಾಸಕ್ತಿ ಕಾಪಾಡಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ.

ಈ ಹಿಂದೆ ಈ ನಿಗಮದ ಸಮ ಸಂಖ್ಯೆಯ ಪತ್ರ ದಿನಾಂಕ: 25.07.2015ರ ಮೂಲಕ ಬೆಂಗಳೂರು ಜಿಲ್ಲೆಯಲ್ಲಿ ಒತ್ತುವರಿಯಿಂದ ಹಿಂಪಡೆದ ಕೆಲವು ಸರ್ಕಾರಿ ಜಮೀನುಗಳ ಬಗ್ಗೆ ಪರಿಶೀಲನೆ ಮಾಡಿಸಿ, ಕಂಡು ಬಂದಿರುವ ನ್ಯೂನ್ಯತೆಗಳ ಬಗ್ಗೆ ಸರ್ಕಾರಕ್ಕೆ ವರದಿಯನ್ನು ಕಳುಹಿಸಲಾಗಿರುತ್ತದೆ

ಹಾಗೂ ಬೆಂಗಳೂರು ನಗರ ಜಿಲ್ಲೆಯಲ್ಲಿ ಒತ್ತುವರಿ ತೆರವು ಮಾಡಲಾಗಿದೆಯೆಂದು ವರದಿಸಲಾಗಿರುವ ಎಲ್ಲಾ ಪ್ರಕರಣಗಳಲ್ಲಿ ಕೂಡಲೇ ಇನ್ನೊಮ್ಮೆ ತೀವ್ರ ಪರಿಶೀಲನೆ ಮಾಡಿಸಿ, ಒತ್ತುವರಿದಾರರನ್ನು ಸಂಪೂರ್ಣವಾಗಿ ಹೊರಹಾಕಿ, ಹಿಂಪಡೆದ ಜಮೀನ್ನು ತಪ್ಪದೇ ಸರ್ಕಾರದ ಸ್ವಾಧಿನದಲ್ಲಿ ಇಟ್ಟುಕೊಳ್ಳುವಂತೆ ಮತು ನ್ಯಾಯಲಯ ಪ್ರಕರಣ ಬಾಕಿ ಇರುವ ಪ್ರಕರಣಗಳಲ್ಲಿ ಕೂಡಲೇ ಅವುಗಳ ಇತ್ಯರ್ಥಕ್ಕೆ ಕ್ರಮ ಕೈಗೊಳ್ಳುವಂತೆ ತಮಗೆ ಸೂಚಿಸಲಾಗಿತ್ತು. ಈ ಬಗ್ಗೆ ತಮ್ಮ ಕಛೇರಿಯಿಂದ ವರದಿ ಬಂದಿರುವುದಿಲ್ಲ.

ಆದ್ದರಿಂದ, ಮೇಲೆ ವಿವರಿಸಿರುವ ಉದಾಹರಣೆಗಲ್ಲಿ ಕಂಡುಬಂದಿರುವ ವ್ಯತ್ಯಾಸಗಳನ್ನು ಗಮನದಲ್ಲಿ ಇಟ್ಟುಕೊಂಡು, ಬೆಂಗಳೂರು ನಗರ ಜಿಲ್ಲೆಯಲ್ಲಿ ಒತ್ತುವರಿ ತೆರವು ಮಾಡಲಾಗಿದೆಯೆಂದು ವರದಿಸಲಾಗಿರುವ ಎಲ್ಲಾ ಪ್ರಕರಣಗಳಲ್ಲಿ ಕೂಡಲೇ ಇನ್ನೊಮ್ಮೆ ತೀವ್ರ ಪರಿಶೀಲನೆ ಮಾಡಿಸಿ, ಒತ್ತುವರಿದಾರರನ್ನು ಸಂಪೂರ್ಣವಾಗಿ ಸರ್ಕಾರಿ ಜಮೀನಿನಿಂದ ಹೊರಹಾಕಿ, ಹಿಂಪಡೆದ ಸರ್ಕಾರಿ ಜಮೀನನ್ನು ತಪ್ಪದೇ ಸರ್ಕಾರದ ಸ್ವಾಧೀನದಲ್ಲಿ ಇಟ್ಟುಕೊಳ್ಳಲು ಕ್ರಮ ಜರುಗಿಸುವುದು. ನ್ಯಾಯಾಲಯ ಪ್ರಕರಣ ಬಾಕಿ ಇರುವ ಪ್ರಕರಣಗಳಲ್ಲಿ ಕೂಡಲೇ ಅವುಗಳ ಇತ್ಯರ್ಥಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು. ಇನ್ನು ಮುಂದೆ ಒತ್ತುವರಿ ತೆರವುಗೊಳಿಸುವ ಸರ್ಕಾರಿ ಜಮೀನುಗಳಲ್ಲಿ ಈ ರೀತಿಯ ವ್ಯತ್ಯಾಸಗಳು ಆಗದಂತೆ ಮುಂಜಾಗ್ರತಾ ಕ್ರಮಗಳನ್ನು ಸಹ ಅಳವಡಿಸಿಕೊಳ್ಳಲು ಕೋರಿದೆ.

ತಮ್ಮ ವಿಶ್ವಾಸಿ,
ಸಹಿ/–

**ಶ್ರೀ ವಿ.ಶಂಕರ್, ಭಾ.ಆ.ಸೇ.,**
ಜಿಲ್ಲಾಧಿಕಾರಿ,
ಬೆಂಗಳೂರು ಜಿಲ್ಲೆ, ಬೆಂಗಳೂರು.